ಚುಕ್ಕೆ ಗುರುತಿಲ್ಲದ ಪ್ರಶ್ನೆ	:	**(311)226**
ಸದಸ್ಯರ ಹೆಸರು	:	**ಶ್ರಿ ಎನ್.ಎ.ಹ್ಯಾರಿಸ್**
ಉತ್ತರಿಸುವ ಸಚಿವರು	:	**(ಶ್ರೀ ಬಿ.ಎಸ್.ಯಡಿಯೂರಪ್ಪ)**
	:	**ಮುಖ್ಯಮಂತ್ರಿಯವರು**

ಅ ಬಿಬಿಎಂಪಿ ವ್ಯಾಪ್ತಿಗೆ ಬರುವ ಒಟ್ಟು ಕ್ರೀಡಾಂಗಣಗಳೆಷ್ಟು; ಅವುಗಳ ಸುಸ್ಥಿತಿ ಮತ್ತು ನಿರ್ವಹಣೆಗಾಗಿ ಕೈಗೊಂಡ ಕ್ರಮಗಳೇನು;

ಪಾಲಿಕೆಯ ವ್ಯಾಪ್ತಿಯಲ್ಲಿ 14 ಕ್ರೀಡಾಂಗಣಗಳಿರುತ್ತವೆ. ಅವುಗಳ ಪೈಕಿ 9 ಕ್ರೀಡಾಂಗಣಗಳ ಕಾಮಗಾರಿಯು ಮುಕ್ತಾಯಗೊಂಡಿದ್ದು, ಉಳಿದ 5 ಕ್ರೀಡಾಂಗಣಗಳ ಕಾಮಗಾರಿಯು ಪ್ರಗತಿಯಲ್ಲಿದೆ. ಅವುಗಳ ನಿರ್ವಹಣೆಗಾಗಿ ಹೊರಗುತ್ತಿಗೆ ನೀಡಲು ಉದ್ದೇಶಿಸಿದ್ದು ಈ ಪ್ರಕ್ರಿಯೆ ಟೆಂಡರ್ ಹಂತದಲ್ಲಿರುತ್ತದೆ.

ಆ ಅಂತರ್‌ರಾಷ್ಟ್ರೀಯ ಮಟ್ಟದ ಕ್ರೀಡೆಗೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕಾರ್ಯಾರಂಭಿಸಿದ ರಾಜೀವ ಗಾಂಧಿ ಕ್ರೀಡಾ ಸಂಕೀರ್ಣದ ಪ್ರಸ್ತುತ ಸ್ಥಿತಿಗತಿಗಳೇನು;

ಸದರಿ ಕ್ರೀಡಾಂಗಣದ ನಿರ್ವಹಣೇಗಾಗಿ ಹೊರ ಗುತ್ತಿಗೆ ನೀಡುವ ಪ್ರಕ್ರಿಯೆಯು ಟೆಂಡರ್ ಹಂತದಲ್ಲಿರುತ್ತದೆ.

ಇ ಈ ಕ್ರೀಡಾಂಗಣಕ್ಕೆ ಬಳಸಿಕೊಂಡ ಜಮೀನು ಮತ್ತು ಇತರ ವೆಚ್ಚಗಳ ವಿವರಗಳೇನು; ಈ ತನಕ ಇಲ್ಲಿ ಜರುಗಿದ ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಕ್ರೀಡಾಕೂಟ ಇತ್ಯಾದಿಗಳ ವಿವರಗಳೇನು;

ಅದಕ್ಕಾಗಿ ಉಪಯೋಗಿಸಿದ ಜಮೀನು 5 ಎಕರೆಯಾಗಿದ್ದು *ದನ್ನೂ ನಿರ್ಮಿಸಲು ಒಟ್ಟು ರೂ. 16.80 ಕೋಟಿಗಳು ವೆಚ್ಚವಾಗಿರುತ್ತದೆ. ಇಲ್ಲಿ 2004ನೇ ಸಾಲಿನಲ್ಲಿ ಅಂತರಾಷ್ಟ್ರೀಯ ಕಿರಿಯ ಬ್ಯಾಸ್ಕೆಟ್ ಬಾಲ್ ಕ್ರೀಡಾಕೂಟವನ್ನುನಡೆಸಲಾಗಿರುತ್ತದೆ.

ಈ ಈ ಕ್ರೀಡಾಂಗಣವನ್ನು ಕ್ರೀಡಾ ಸಂಸ್ಥೆಗಳ ನಿರ್ವಹಣೆಗೆ ಒಪ್ಪಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಆ ಕುರಿತಾದ ವಿವರಗಳೇನು?

ಹೊರಗುತ್ತಿಗೆ ಟೆಂಡರ್ ಪ್ರಕ್ರಿಯೆಯಲ್ಲಿ ಕ್ರೀಡಾ ಸಂಸ್ಥೆಗಳೂ ಸಹ ಭಾಗವಹಿಸಬಹುದಾಗಿರುತ್ತದೆ.

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ	**: (312)227**
ಸದಸ್ಯರ ಹೆಸರು	**: ಶ್ರೀ ಹ್ಯಾರಿಸ್‌ಎನ್.ಎ. (ಶಾಂತಿನಗರ)**
ಉತ್ತರಿಸುವ ಸಚಿವರು	**: (ಶ್ರೀ ಬಿ.ಎಸ್.ಯಡಿಯೂರಪ್ಪ)**
	ಮಾನ್ಯ ಮುಖ್ಯಮಂತ್ರಿಗಳು

ಅ) ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ನೀಡುವ ಕುರಿತಾದ ಪ್ರಗತಿಯ ವಿವರಗಳೇನು;

ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರಕಿಸಿಕೊಡಲು ಸರ್ಕಾರವು ದಿನಾಂಕ 11.02.2005ರಂದು ಸನ್ಮಾನ್ಯ ಪ್ರಧಾನಮಂತ್ರಿಯವರಿಗೆ ಕರ್ನಾಟಕ ರಾಜ್ಯದ ಜನತೆಯ ಪರವಾಗಿ ಮನವಿ ಪತ್ರವನ್ನು ಸಲ್ಲಿಸಿದೆ. ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳು ದಿನಾಂಕ 02.07.2008ರಂದು ಖ್ಯಾತ ಸಾಹಿತಿಗಳು ಹಾಗೂ ಪ್ರಮುಖ ಗಣ್ಯರ ನಿಯೋಗದೊಂದಿಗೆ ಸನ್ಮಾನ್ಯ ಪ್ರಧಾನಮಂತ್ರಿಯವರನ್ನು ಭೇಟಿ ಮಾಡಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರಕಿಸಿಕೊಡಲು ಮನವಿ ಸಲ್ಲಿಸಲಾಗಿದೆ.

ಅ) ಶಾಸ್ತ್ರೀಯ ಭಾಷಾ ಸ್ಥಾನಮಾನ ನೀಡುವಲ್ಲಿ ಕೇಂದ್ರ ಸರ್ಕಾರ ನಿಗದಿಪಡಿಸಿರುವ ಅರ್ಹತಾ ನೀತಿ–ನಿಯಮಗಳೇನು;

ಕೇಂದ್ರ ಸರ್ಕಾರವು ಭಾರತೀಯ ಭಾಷೆಗಳಿಗೆ ಶಾಸ್ತ್ರೀಯ ಸ್ಥಾನಮಾನಗಳನ್ನು ನೀಡುವ ಸಂಬಂಧ ದಿನಾಂಕ: 01.11.2004ರಲ್ಲಿ ಭಾಷಾ ತಜ್ಞರ ಸಮಿತಿಯೊಂದನ್ನು ರಚಿಸಿ. ಶಾಸ್ತ್ರೀಯ ಭಾಷೆ ಎಂದು ಘೋಷಿಸುವ ಬಗ್ಗೆ ಕೆಳಕಂಡ ಮಾನದಂಡವನ್ನು ನಿಗದಿಪಡಿಸಿದೆ:

1. ಭಾಷೆಯ ಪ್ರಾಚೀನತೆಯು ಸಾವಿರ ವರ್ಷಗಳಿಗೂ ಮಿಗಿಲಾದ ಚರಿತ್ರೆಯನ್ನು ಹೊಂದಿರಬೇಕು.
2. ಭಾಷೆಯ ಸಾಹಿತ್ಯ ಮತ್ತು ಪಠ್ಯಗಳು ಅಮೂಲ್ಯವಾದ ಪುರಾತನ ಪರಂಪರೆಯನ್ನು ಹೊಂದಿಸಬೇಕು.
3. ಅದರ ಸಾಹಿತ್ಯಕ ಸಂಪ್ರದಾಯವು ಮೂಲದ್ದಾಗಿರಬೇಕು ಹಾಗೂ ಯಾವುದೇ ಇತರ ಆಡುಭಾಷೆಯ ಸಮುದಾಯದಿಂದ ಎರವಲು ಪಡೆದದ್ದಿರಬಾರದು.
4. ಸದರಿ ಶಾಸ್ತ್ರೀಯ ಭಾಷೆ ಹಾಗೂ ಅದರ ಸಾಹಿತ್ಯವು ಈಗಿನ ಸ್ವರೂಪಕ್ಕಿಂತ ಭಿನ್ನವಾಗಿರಬೇಕು ಹಾಗೂ ಮೂಲ ಪದಗಳಿಗಿಂತ (ಗ್ರೀಕ್, ಲ್ಯಾಟೀನ್, ರೋಮನ್, ಸಂಸ್ಕೃತ, ಪಾಲಿ ಮತ್ತು ಆಧುನಿಕ ಇಂಡೋ ಆರ್ಯನ್) ಬೆಳವಣಿಗೆಯಿಂದ ಪ್ರತ್ಯೇಕಗೊಂಡಿರಬೇಕು.

ಇ) ಶಾಸ್ತ್ರೀಯ ಭಾಷಾ ಸ್ಥಾನಮಾನವನ್ನು ಪಡೆದುಕೊಳ್ಳುವ ದಿಶೆಯಲ್ಲಿ ಸರ್ಕಾರ ಮಾಡಿರುವ ಪ್ರಯತ್ನಗಳೇನು?

ಪ್ರಪ್ರಥಮವಾಗಿ ದಿನಾಂಕ 11.2.2005ರಂದು ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿ ಯವರು ರಾಜ್ಯ ಜನತೆಯ ಪರವಾಗಿ ಸನ್ಮಾನ್ಯ ಪ್ರಧಾನಮಂತ್ರಿಯವರಿಗೆ ಕನ್ನಡ ಭಾಷೆಯನ್ನು ಶಾಸ್ತ್ರೀಯ ಭಾಷೆ ಎಂದು ಘೋಷಿಸಲು ಕೋರಿ ಮನವಿ ಸಲ್ಲಿಸಿದರು. ದಿನಾಂಕ.18–05–2005 ರ ಪತ್ರವನ್ನು ಕೇಂದ್ರ ಸಂಸ್ಕೃತಿ ಸಚಿವಾಲಯಕ್ಕೆ ಬರೆದು ರಾಜ್ಯದ ಬೇಡಿಕೆಗೆ ಪೂರಕ ಟಿಪ್ಪಣಿಗಳನ್ನು ಹಾಗೂ ದಾಖಲಾತಿಗಳನ್ನು ಒದಗಿಸಲು ಕನ್ನಡಕ್ಕೆ ಶಾಸ್ತ್ರೀಯ ಭಾಷೆ ದೊರಕಿಸಿಕೊಡುವುದು ಪ್ರಮುಖ ಪಾತ್ರ ವಹಿಸುವ ತಮಿಳು ವಿದ್ವಾಂಸರ ಕೃತಿಯೂ

ಸೇರಿದಂತೆ ಹಲವಾರು ಧಾಖಲೆಗಳನ್ನು ದಿನಾಂಕ:25–11–2005 ರ ಪತ್ರದಲ್ಲಿ ಸಂಸ್ಕೃತಿ ಸಚಿವಾಲಯಕ್ಕೆ ಕಳುಹಿಸಲಾಗಿದೆ. ಹಿಂದಿನ ಮಾನ್ಯ ಮುಖ್ಯಮಂತ್ರಿಗಳು ಸಹ ದಿನಾಂಕ:24–5–2006ರಂದು ಕೇಂದ್ರದ ಸಂಸ್ಕೃತಿ ಸಚಿವರು, ಮಾನವ ಸಂಪನ್ಮೂಲ ಸಚಿವರುಗಳನ್ನು ಭೇಟಿ ಮಾಡಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನ ನೀಡುವ ಕುರಿತು ಕೋರಿಕೆ ಸಲ್ಲಿಸಿದ್ದಾರೆ. ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸುವ ಸಂಸತ್ ಸದಸ್ಯರು ಹಾಗೂಲೋಕಸಭಾ ಸದಸ್ಯರುಗಳಿಗೆ ಮಾನ್ಯ ಮುಖ್ಯಮಂತ್ರಿಯವರಿಂದ ದಿ:13–6–2006ರಂದು ಪತ್ರ ಬರೆದು ಕನ್ನಡವನ್ನು ಶಾಸ್ತ್ರೀಯ ಭಾಷೆಯನ್ನಾಗಿ ಘೋಷಿಸಲು ಕೇಂದ್ರ ಸರ್ಕಾರದ ಮೇಲೆ ವಿಶೇಷ ಪ್ರಭಾವ ಬೀರುವಂತೆಯು ಕೋರಲಾಗಿದೆ. ಘನತೆವೆತ್ತ ರಾಜ್ಯಪಾಲರು ದಿನಾಂಕ.14.1.2008ರಂದು ಸನ್ಮಾನ್ಯ ಪ್ರಧಾನಮಂತ್ರಿಗಳು ಹಾಗೂ ಕೇಂದ್ರ ಸಂಸ್ಕೃತಿ ಸಚಿವರಿಗೆ ಈ ನಿಟ್ಟಿನಲ್ಲಿ ಪತ್ರ ಬರೆದಿರುತ್ತಾರೆ. ಇತ್ತೀಚೆಗೆ ದಿನಾಂಕ 02.07.2008 ರಂದು ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಪ್ರಮುಖ ಗಣ್ಯರ ನಿಯೋಗದೊಂದಿಗೆ ಸನ್ಮಾನ್ಯ ಪ್ರಧಾನಮಂತ್ರಿಯವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಗಿದೆ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (313)228
2) ಸದಸ್ಯರ ಹೆಸರು : ಶ್ರೀ ಹ್ಯಾರಿಸ್ ಎನ್.ಎ.(ಶಾಂತಿನಗರ)
3) ಉತ್ತರಿಸಬೇಕಾದ ಸಚಿವರು : (ಶ್ರೀ ಬಿ.ಎಸ್.ಯಡಿಯೂರಪ್ಪ)
ಮುಖ್ಯ ಮಂತ್ರಿಗಳು

ಅ) ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿರುವ ಬಿ.ಡಿ.ಎ. ಬಡಾವಣೆಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಅಭಿವೃದ್ಧಿ ಪಡಿಸದ ಬಡಾವಣೆಗಳ ಸಂಖ್ಯೆ ಎಷ್ಟು;

ಒಟ್ಟು ಬಡಾವಣೆಗಳ ಸಂಖ್ಯೆ 257.

ಅವುಗಳಲ್ಲಿ ಅಭಿವೃದ್ಧಿ ಪಡಿಸದ ಬಡಾವಣೆಗಳು 04.

ಆ) ಅಭಿವೃದ್ಧಿ ಪಡಿಸದ ಬಡಾವಣೆಗಳ ನಿವೇಶನಗಳನ್ನು ಯಾವ ಸಾಲಿನಲ್ಲಿ ಹಂಚಿಕೆ ಮಾಡಲಾಗಿತ್ತು;

ಪ್ರಶ್ನಿತ ನಿವೇಶನಗಳನ್ನು 2002 ರಿಂದ 2004ನೇ ಸಾಲಿನಲ್ಲಿ ಹಂಚಿಕೆ ಮಾಡಲಾಗಿದೆ.

ಇ) ನಿವೇಶನದಾರರು ಮನೆ ಕಟ್ಟಿಕೊಳ್ಳಲು ಬೇಕಾಗುವ ಮೂಲಭೂತ ಸೌಕರ್ಯಗಳನ್ನು ಬಿ.ಡಿ.ಎ. ಒದಗಿಸಿ ಕೊಡಲು ವಿಳಂಬ ಮಾಡಲು ಕಾರಣಗಳೇನು; ಈ ಕುರಿತು ಸರಕಾರದ ಸಕಾಲಿಕ ಕ್ರಮಗಳೇನು;

ಕಳೆದ 3 ವರ್ಷಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿದ ಸರ್.ಎಂ.ವಿಶ್ವೇಶ್ವರಯ್ಯ, ಸರ್.ಎಂ.ವಿಶ್ವೇಶ್ವರಯ್ಯ ಮುಂದುವರಿದ ಬಡಾವಣೆ, ಬನಶಂಕರಿ 6ನೇ ಹಂತ ಮತ್ತು ಬನಶಂಕರಿ 6ನೆ ಹಂತ ಮುಂದುವರಿದ ಬಡಾವಣೆಗಳಿಗೆ ಮೂಲಭೂತ ಸೌಕರ್ಯಗಳಾದ ವಿದ್ಯುಚ್ಛಕ್ತಿಯನ್ನು ಒದಗಿಸುವ